**ದಿನಾಂಕ 17-08-2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ:– ಅರ್ಜಿದಾರರ ಪರ ವಕೀಲರಿಂದ:–**

**ಈ ಕೇಸಿನಲ್ಲಿ ನಾನು ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಭಾಗವಾಗಿ ಈ ದಿನ ಪ್ರಮಾಣಪತ್ರ ಸಲ್ಲಿಸುತ್ತಿದ್ದೇನೆ. ಪ್ರಮಾಣಪತ್ರದಲ್ಲಿರುವ ಮಾಹಿತಿ ಸರಿ ಇದ್ದು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.**

Ex.P–1.Certified copy of Judgment in LAC No. 17/2012.

Ex.P–2.Certified copy of Judgment in LAC No. 16, 5, 9, 11, 25, 26, 27, 28, 29, 35, 36, 37 and 118/2012

**ಪಾಟೀಸವಾಲು:– ಎದುರುದಾರರ ಪರ ಶ್ರೀ ಡಿ ಜಿ ಪಿ ವಕೀಲರಿಂದ:–**

ವಿಚಾರಣಾ ನ್ಯಾಯಾಲಯದಲ್ಲಿ ಆದೇಶವಾಗಿರುವ ಪರಿಹಾರವನ್ನು ಜಾರಿ ಪ್ರಕರಣವನ್ನು ದಾಖಲು ಮಾಡಿ ಪರಿಹಾರವನ್ನು ನಾನು ಪಡೆದಿದ್ದೇನೆ ಎಂದರೆ ಸರಿ . ನಾನು ಪರಿಹಾರ ಪಡೆದ ನಂತರ ಜಾರಿ ಕೇಸು ಮುಕ್ತಾಯವಾಯಿತು ಎಂದರೆ ಸರಿ . ನಿಗದಿತ ಅವಧಿಯಲ್ಲಿ ಮೇಲ್ಮನವಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ . ನಮ್ಮ ಜಮೀನಿನ ಪಕ್ಕದ ಮಾಲೀಕರಾದ ಶಿವಣ್ಣಭೋವಿ ಪ್ರಕರಣದಲ್ಲಿ ಪರಿಹಾರ 3–4 ವರ್ಷಗಳ ಹಿಂದೆ ಗೊತ್ತಾಯಿತು. ನಿಗದಿತ ಅವಧಿಯಲ್ಲಿ ಮೇಲ್ಮನವಿ ಸಲ್ಲಿಸಲು ತೊಂದರೆ ಇರಲಿಲ್ಲ. ಕಾಲಮಿತಿ ಅವಧಿಯಲ್ಲಿ ನಾನು ಮೇಲ್ಮನವಿ ಸಲ್ಲಿಸದ ಕಾರಣ ಹೆಚ್ಚಿನ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಈಗ ನನಗೆ 2 ಎಕರೆ ಜಮೀನಿನು ಇದೆ. ನಾನು ವ್ಯವಸಾಯ ಮಾಡುತ್ತೇನೆ. ಹೆಚ್ಚಿನ ಪರಿಹಾರ ಕೊಡದಿದ್ದರೆ ನನಗೆ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ವಿಚಾರಣೆಯಾದಲ್ಲಿ ಆದೇಶವಾಗಿರುವ ಪರಿಹಾರ ಕಾನೂನುಬದ್ಧವಾಗಿದೆ ಎಂದರೆ ಸರಿ .

**ಮರು ವಿಚಾರಣೆ:– ಇಲ್ಲ.**

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.